# ಜೈನಧರ್ಮ ಮತ್ತು ಕನ್ನಡ ಸಾಹಿತ್ಯ



ಡಾ.ಟಿ.ವಿ.ವೆಂಕಟಾಚಲಶಾಸ್ತ್ರೀ


ಬೆಳಗಾವಿಯ ಕಮಲ ಬಸದಿ

**ಕನ್ನಡ ಸಾಹಿತ್ಯಕ್ಕೂ ಜೈನಧರ್ಮಕ್ಕೂ ಅವಿನಾಭಾವ ನಂಟು. ಕನ್ನಡದ ಆದಿಕವಿಗಳೆಲ್ಲರೂ ಜೈನಧರ್ಮೀಯರೇ. ಕನ್ನಡ ಸಾರಸ್ವತ ಲೋಕವನ್ನು ಕಟ್ಟಿಬೆಳೆಸಿದ ಆ ಪುಣ್ಯಪುರುಷರ ವಿದ್ವತ್ಪೂರ್ಣ ಚಿತ್ರಣವನ್ನು ನಮಗೆ ನೀಡಿರುವ ಸನ್ಮಾನ್ಯ ಲೇಖಕರು ಕನ್ನಡದ ಹಿರಿಯ ಸಂಶೋಧಕರು.**

**ಕ**ರ್ನಾಟಕ ಜೈನಧರ್ಮದ ಸಂಪರ್ಕವನ್ನು ಪಡೆದದ್ದು ಕ್ರಿ.ಪೂ. ಸುಮಾರು ೪ ನೆಯ ಶತಮಾನದಲ್ಲಿ ಎಂದು ಸಾಮಾನ್ಯವಾಗಿ ತಿಳಿಯಲಾಗಿದೆ. ಕೆಲವರು ತತ್ಪೂರ್ವದಲ್ಲೇ ಎಂದೂ, ಇನ್ನು ಕೆಲವರು ತದನಂತರದಲ್ಲಿ ಎಂದೂ ವಾದಿಸಿರುವುದುಂಟು. ಇಲ್ಲಿ ಆ ಚರ್ಚೆ ಅನಗತ್ಯ. ಕನ್ನಡ ಸಾಹಿತ್ಯ ಈ ನೆಲದಲ್ಲಿ ಕಣ್ಣು ತೆರೆಯುವ ಕಾಲಕ್ಕೆ ಮೊದಲೇ ಆ ಧರ್ಮ ಇಲ್ಲಿ ನೆಲೆಗೊಂಡಿತ್ತು ಎಂಬುದರಲ್ಲಿ ಸಂಶಯವಿರಲಾರದು. ಆಗ್ಗೆ ಮತ್ತು ಈಚೆಗೆ ಪ್ರಾಚೀನ ಕರ್ನಾಟಕದ **ಶ್ರವಣಬೆಳ್ಗೊಳ, ಕೊಪ್ಪಳ, ಬನವಾಸಿ, ಹಲಸಿ, ಹನಸೋಗೆ** ಈ ಮೊದಲಾದ ಕಡೆಗಳಲ್ಲಿ ಅದರ ವಿವಿಧ ಪಂಥಗಳು ಪಂಗಡಗಳು ಪ್ರಬಲಿಸಿದುವು; ಅವಕ್ಕೆ **ಕದಂಬ ಗಂಗ ರಾಷ್ಟ್ರಕೂಟ ಚಾಲುಕ್ಯ ಹೊಯ್ಸಳ** ಮುಂತಾದ ರಾಜವಂಶಗಳ ಪ್ರೋತ್ಸಾಹ ಪೋಷಣೆಗಳು ವಿಶೇಷವಾಗಿ ದೊರೆತವು. ಈಚೆಗೆ ಸುಮಾರು ೧೨ ನೆಯ ಶತಮಾನದಿಂದಿತ್ತ ಅದರ ಪ್ರಭಾವ ಇಳಿಮುಖವಾದರೂ ಸೌಂದತ್ತಿಯ ರಟ್ಟರು, ಕೊಲ್ಲಾಪುರದ ಶಿಲಾಹಾರರು, ಚೆಂಗಾಳ್ವ ಕೊಂಗಾಳ್ವರು, ತುಳುವ ನಾಡಿನ ಅರಸರು, ವಿಜಯನಗರ ಮತ್ತು ಮೈಸೂರರಸರು ಮೊದಲಾದವರ ಕಾಲದಲ್ಲಿಯೂ ಆ ಧರ್ಮದ ಅನುಯಾಯಿಗಳಿಗೆ, ಕವಿಗಳಿಗೆ ತಕ್ಕಮಟ್ಟಿಗೆ ಆದರಣೆ ಆಶ್ರಯಗಳು ದೊರೆತದ್ದು ಇತಿಹಾಸದಿಂದ ತಿಳಿಯುತ್ತದೆ.

ಕರ್ನಾಟಕದ ಒಂದು ಪಂಗಡದ ಜನರ ಧರ್ಮವಾಗಿ ಜೈನಧರ್ಮದ ಸ್ಥಾನಮಾನಗಳು ಏನೇ ಇರಲಿ, ಕನ್ನಡ ಭಾಷೆ ಸಾಹಿತ್ಯಗಳ ಇತಿಹಾಸದ ದೃಷ್ಟಿಯಿಂದ ಆ ಧರ್ಮ, ಅದರ ಅನುಯಾಯಿಗಳು ಮಾಡಿರುವ ಸೇವೆ ಸಾಧನೆಗಳು ಕೃತಜ್ಞತೆಯಿಂದಲೂ ಅಭಿಮಾನದಿಂದಲೂ ನೆನೆಯಬೇಕಾದವು. ಕನ್ನಡ ಭಾಷೆಯ ಹಳೆಯ ಉಲ್ಲೇಖಗಳಲ್ಲಿ ಟಾಲೆಮಿಯ (ಕ್ರಿ.ಶ. ೨ ನೆಯ ಶತಮಾನ) ಭೂಗೋಲದೊಳಗೆ, **ಬನವಾಸಿ ಹಲಸಿ ಪುನ್ನಾಟ** ಈ ಕೆಲವು ಪ್ರಾಚೀನ ಜೈನ ಕೇಂದ್ರಗಳ ಹೆಸರುಗಳು ಅವುಗಳ ಗ್ರೀಕ್ ರೂಪಗಳಲ್ಲಿ ಕಾಣಿಸಿಕೊಂಡಿರುವಂತೆ ಕಾಣುತ್ತದೆ. ಈಗ ತಿಳಿದಿರುವ ಮಟ್ಟಿಗೆ ಶ್ರವಣಬೆಳ್ಗೊಳದ ಚಿಕ್ಕ ಬೆಟ್ಟದ ಮೇಲಿರುವ ಕೆಲವು ಶಾಸನಗಳು, ಜೈನಯತಿಗಳ ಸಮಾಧಿಮರಣವನ್ನು ವಿಷಯವನ್ನಾಗಿ ಉಳ್ಳವು, ಕನ್ನಡ ಸಾಹಿತ್ಯದಲ್ಲಿ ಕವಿತ್ವಪದ್ಧತಿಯ ಅತಿಪ್ರಾಚೀನ ನಿದರ್ಶನಗಳು. ಅನ್ಯತ್ರ ದೊರೆತಿರುವ ಅತಿಪ್ರಾಚೀನ ಗದ್ಯಾತ್ಮಕ ಶಾಸನಗಳೊಡನೆ ಇವನ್ನು ಹೋಲಿಸಿದರೆ, ಇವುಗಳಲ್ಲಿ ಭಾಷೆಗೆ ಸಾಹಿತ್ಯದ ಹದ ಸಮನಿಸಿರುವುದು ಕಾಣುತ್ತದೆ. ಛಂದಸ್ಸು ಅಲಂಕಾರ ವ್ಯಾಕರಣ ಇವುಗಳ ಎಣಿಕೆಗೆ ಸಿಕ್ಕಬಲ್ಲ ಗುಣಲಕ್ಷಣಗಳು ಅಷ್ಟಿಷ್ಟು ಪ್ರಮಾಣದಲ್ಲಿ ಇಲ್ಲಿ ಮೈದೋರಿರುವುದು ಕಾಣುತ್ತದೆ. ಪ್ರಯೋಗಗಳೂ ಇವೆ, ಪರಿಣತಿಯೂ ಇದೆ. ಈ ಪದ್ಯರಚನೆಗಳನ್ನು, ದೊರೆತ ಸಾಹಿತ್ಯದಲ್ಲಿ ತುಂಬ ಹಳೆಯದು ಎಂಬುದನ್ನು, ದೊರೆಯದಿದ್ದರೂ ನಿಶ್ಚಿತ ಬಾಹ್ಯಾಧಾರಗಳಿಂದ ಕವಿಗಳು ಇವರು, ಕೃತಿಗಳು ಇವು ಎಂದು ಗೊತ್ತುಮಾಡಬಹುದಾದ ಸಾಕ್ಷ್ಯಗಳನ್ನು ಹಿಡಿದು ಈಗಾಗಲೇ ವಿದ್ವಾಂಸರು **ಜೈನರೇ ಕನ್ನಡ ಸಾಹಿತ್ಯದ ಮೊದಲ ಹರಿಕಾರರು, ಆದಿ ಕೃಷಿಕರು** ಎಂದು ಸರಿಯಾಗಿಯೇ ಸಾರಿದ್ದಾರೆ. ಈ ಅಭಿಪ್ರಾಯವನ್ನು ಬದಲಿಸುವ ಹೊಸ ಆಧಾರಗಳೇನೂ ಇನ್ನೂ ಕಂಡುಬಂದಿಲ್ಲ.

ಕನ್ನಡ ಸಾಹಿತ್ಯದ ಆರಂಭಕಾಲ ಎನ್ನುವುದು ಒಟ್ಟಿನಲ್ಲಿ



ಆದಿಕವಿ ಪಂಪ

ಜೈನಧರ್ಮದ ಉಚ್ಛ್ರಾಯ ಕಾಲ; ಜೈನಧರ್ಮದ ಕವಿಗಳು ಕನ್ನಡ ಭಾಷೆಯಲ್ಲಿ ಸಾಹಿತ್ಯದ ಚಿನ್ನದ ಬೆಳೆ ತೆಗೆದು ಭಾಷೆ ಸಾಹಿತ್ಯಗಳ ಹೆಮ್ಮೆಗೆ ಕೋಡು ಮೂಡಿಸಿದ ಕಾಲ. ಕ್ರಿ.ಶ. ೯ ರಿಂದ ೧೨ ನೆಯ ಶತಮಾನದ ನಡುಗಾಲದವರೆಗೆ ಇದರ ಹರಹು. ಕರ್ನಾಟಕದಲ್ಲಿ ತಕ್ಕಷ್ಟು ಹಿಂದಿನಿಂದಲೇ ಬೆಳೆದು ಬಲಗೊಳ್ಳುತ್ತ ಬಂದಿದ್ದ ಜೈನಧರ್ಮ ಧರ್ಮಗಳೆಲ್ಲೆಲ್ಲ ಮೇಲಾದ್ದು, ಶ್ರೇಯಸ್ಕರವಾದ್ದು ಎನ್ನುವುದನ್ನು ೮-೯ ನೆಯ ಶತಮಾನದೀಚೆಯ ಇಲ್ಲಿಯ ಅರಸುಮನೆತನಗಳು ಮನ ಗಂಡದ್ದು, ಸಮಾಜದ ಮೇಲುವರ್ಗದವರೂ ವಿದ್ವಾಂಸರೂ ವಿರಾಗಿಗಳೂ ಆ ಧರ್ಮದ ಹಿರಿಮೆಗೆ ಮನಸೋತು ಅದರ ಅನುಯಾಯಿಗಳಾದ್ದು, ಆ ಧರ್ಮದ ಬೆಳವಣಿಗೆಗೆ ಮಿಗಿಲಾಗಿ ದುಡಿಯುವ ಉತ್ಸಾಹವನ್ನು ತುಂಬಿದುವು. ಜನಭಾಷೆಯ ಮೂಲಕ ಜೈನಧರ್ಮ ತತ್ತ್ವಗಳನ್ನೂ ಮಹಾಪುರುಷರ ಚರಿತ್ರೆಗಳನ್ನೂ ತಿಳಿಯಹೇಳುವುದು ಎಂದಾದ ಮೇಲೆ, ಹಿರಿಯ ಕವಿಗಳು ಅಂಥ ಸಾಹಿತ್ಯದ ರಚನೆಗೆ ಕೈಯಿಟ್ಟರು. ಕಾವ್ಯಧರ್ಮವನ್ನೂ ಧರ್ಮವನ್ನೂ ಒಡನಡೆಸಿದ ಸವ್ಯಸಾಚಿಗಳಾದರು. ಗಂಗ ರಾಷ್ಟ್ರಕೂಟ ಅರಸರ ಪೋಷಣೆ ಪ್ರೋದ್ಬಲಗಳು ದೊರೆತ ಮೇಲೆ ಗುಣ ಗಾತ್ರಗಳಲ್ಲಿ ಮೇಲಾದ ಸಾಹಿತ್ಯಗ್ರಂಥಗಳು ಕನ್ನಡದಲ್ಲಿ ಹುಟ್ಟತೊಡಗಿದುವು.

ಆರಂಭಕಾಲದ ಕಾವ್ಯೋದ್ಯಮಿಗಳು ಪ್ರತಿಭಾಸಂಪನ್ನರಾದ ಸಾಹಿತ್ಯಾಚಾರ್ಯರಾಗಿದ್ದುದು ಕನ್ನಡದ ಪುಣ್ಯವೇ ಸರಿ. ಹಳ ಮೊರೆಯಿಂದ ಹೊರವಾಗಿ ಹಬ್ಬಿಕೊಂಡು ಬಂದಿದ್ದ ಆರ್ಷ ಭಾಷೆಯ ಮಹಾಕವಿಗಳ ಇತಿಹಾಸಕಾವ್ಯಗಳನ್ನೂ ಕಾವ್ಯ ನಾಟಕಗಳನ್ನೂ ಜೈನಧಾರ್ಮಿಕ ಸಾಹಿತ್ಯವನ್ನೂ ಇವೇ ಬಗೆಯ ಪ್ರಾಕೃತ ಭಾಷಾರಚನೆಗಳನ್ನೂ ಈ ಕಾಲದ ಕವಿಗಳು ವಿಶೇಷ ವಾಗಿ ಅಭ್ಯಾಸ ಮಾಡಿರುತ್ತಿದ್ದರು. ಉತ್ಕೃಷ್ಟ ಭಾರತೀಯ ಸಾಹಿತ್ಯ ಪರಂಪರೆಯ ಸಾರವನ್ನು ಹೀರಿ ಹೊಮ್ಮಿಸಬಲ್ಲ ಕೌಶಲ ಉಳ್ಳವರಾಗಿದ್ದರು. **ವಾಲ್ಮೀಕಿ ವ್ಯಾಸ ಭಾಸ ಕಾಲಿದಾಸ ಭಾರವಿ ಭವಭೂತಿ ಭಟ್ಟನಾರಾಯಣ ಮಾಘ** ಈ ಕೆಲವರು ಸಂಸ್ಕೃತಕವಿಗಳ, **ಜಿನಸೇನ ಗುಣಭದ್ರ ರವಿಷೇಣ** ಈ ಕೆಲವರು ಜೈನಾಚಾರ್ಯರ ಉತ್ಕೃಷ್ಟ ಸಾಹಿತ್ಯವನ್ನೋದಿ ಅಲ್ಲಿಯ ಸ್ವಾರಸ್ಯವನ್ನು ಗ್ರಹಿಸಿದವರಾಗಿದ್ದರು, ಸಂಗ್ರಹಿಸಬಲ್ಲವರಾಗಿದ್ದರು. **ಪಂಪ–ಜಿನಸೇನ, ನೇಮಿಚಂದ್ರ – ಗುಣಭದ್ರ, ನಾಗಚಂದ್ರ – ರವಿಷೇಣ, ಅಗ್ಗಳ – ವೀರನಂದಿ** ಹೀಗೆ ಈ ಕೆಲವರ ರಚನೆಗಳ ಪರಸ್ಪರತುಲನೆಯಿಂದ ಆ ಸಂಗ್ರಹಣೆಯ ಸ್ವರೂಪವನ್ನು ಮನಗಾಣಬಹುದು. ಕಥೆ ಸನ್ನಿವೇಶ ಪಾತ್ರ ಮೊದಲಾದವುಗಳಿಗೆ ಸಂಬಂಧಿಸಿದಂತೆ ಯಥೋಚಿತ ಪ್ರಮಾಣದ ಮತ್ತು ವಿಧಾನದ ಅನುವಾದ ಅನುಕರಣೆಗಳಲ್ಲಿ ಅದರ ಅಚ್ಚು ಮೂಡಿರುವುದನ್ನು ನಿಚ್ಚಳವಾಗಿ ನಾವು ಗುರುತಿಸಬಹುದು.


ವೈದಿಕಮಾರ್ಗದ ಪುರಾಣೇತಿಹಾಸಗಳನ್ನು ಭಿನ್ನದೃಷ್ಟಿಯಿಂದ ಕಂಡು ರೂಪಿಸಿದ ಸಂಸ್ಕೃತ ಪ್ರಾಕೃತ ಜೈನಕವಿಕೃತಿಗಳ ನವೀನ ವಸ್ತುವಿನ್ಯಾಸ, ವಿಚಾರಧಾರೆ, ನಿರೂಪಣವಿಧಾನ ಕನ್ನಡ ಭಾಷೆಯ ಜೈನಕವಿಗಳ ಮೇಲೆ ತಮ್ಮ ಪ್ರಭಾವಮುದ್ರೆಯನ್ನು ಒತ್ತಿದುವು. ಪ್ರಾಚೀನವೂ ಪೌರಾಣಿಕವೂ ಆದ ದೃಶ್ಯಗಳೂ ಧ್ಯೇಯ ಧೋರಣೆಗಳೂ ವರ್ತಮಾನಕಾಲದ ಸಾಮಾಜಿಕ ದೃಶ್ಯಗಳೊಡನೆ ಧ್ಯೇಯ ಧೋರಣೆಗಳೊಡನೆ ಕೆಲವೊಮ್ಮೆ ಸಮೀಕೃತಗೊಂಡುವು; ಇನ್ನು ಕೆಲವೊಮ್ಮೆ ಚಿಕಿತ್ಸೆಗೆ ಒಳಪಟ್ಟುವು. ಮಾನವೀಯ ಸ್ಪರ್ಶದಿಂದ ದೀಪ್ತವಾದ ಸ್ವಕೀಯ ಅನುಭವಸಂಪನ್ನತೆ ಹೊಸ ಮೌಲ್ಯಗಳನ್ನು ಪ್ರಸಾರ ಮಾಡಿದುವು, ಹೊಸ ಪರಿಯ ದೃಶ್ಯಗಳನ್ನು ರೂಪಿಸಿದುವು. ಪಂಪ ರನ್ನ ಮೊದಲಾದವರ ಕೃತಿಗಳಲ್ಲಿ ಇದರ ಸಾಕ್ಷ್ಯವಿದೆ.

ವಸ್ತುವಿನ ದೃಷ್ಟಿಯಿಂದ ಹಳೆಯ ಇತಿಹಾಸ ಪುರಾಣಗಳು ಕಾವ್ಯದ ಸ್ವರ್ಣಲೇಪವನ್ನು ಪಡೆದು ಕನ್ನಡ ಜನರಿಗೆ ಆತ್ಮೀಯ ವಾದವು ಎನ್ನುವುದರ ಜೊತೆಗೆ ನೆನೆಯಬೇಕಾದ್ದು ಭಾಷೆಗೆ ದೊರೆತ ಮನ್ನಣೆಯನ್ನು, ಬಿನ್ನಣವನ್ನು. ಸಿದ್ಧಹಸ್ತರಾದ ಜೈನಕವಿಗಳ ಕೈಯಲ್ಲಿ ಕನ್ನಡ ಭಾಷೆ ಹೊಸ ಅಲಗಿನ ಹರಿತ ವನ್ನು ಪಡೆಯಿತು. ಅದರಲ್ಲಿ ಅವರು 'ಆತ್ಮೀಯ ಮುಖ ಬಿಂಬ'ವನ್ನು ಕಾಣಲು ತವಕಿಸಿದರು. ಆಗ ಭಾಷೆಗೆ ಕೂಡಿದ ಕೆಚ್ಚುನೆಚ್ಚುಗಳು ಮುಂದೆ ಅದರ ಯಾತ್ರೆಯಲ್ಲಿ, ಕಟ್ಟಿದ ಬುತ್ತಿಯಾಯಿತು; ಭಾಷೆಯೂ ಬಂಧವೂ ಮತ್ತೆ ಮತ್ತೆ ಆವರ್ತಿಸಿದ ಮೋಹಾನುಬಂಧವೇ ಆಯಿತು. ಅಚ್ಚಗನ್ನಡದ ನೂರು ಸಾವಿರ ಲೆಕ್ಕದ ಶಬ್ದಗಳು ತಮ್ಮ ಕಳೆ ಕಾಂತಿಗಳನ್ನು ಹೊಮ್ಮಿಸುವಂತೆ ಗದ್ಯಪದ್ಯಗಳಲ್ಲಿ ಸಿಡಿದು, ಸೀರುಂಬುಳಾಡಿದ

ಮುತ್ತುಗಳಾದವು. ಸಮಸಂಸ್ಕೃತ ತದ್ಭವ ದೇಸಿ ಇವುಗಳ ತನಿಶ್ರುತಿ ಮಿಶ್ರಮಾಧುರ್ಯಗಳ ಕಣ್ಣುಮುಚ್ಚಾಲೆಯಾಯಿತು. ನಾಡವರ ಆಡುಮಾತಿನ ಹಳ್ಳಕೊಳ್ಳದಲ್ಲಿ ತೆಳ್ಳಗೆ ಹರಿಯುತ್ತಿದ್ದ ಕನ್ನಡದ ನುಡಿವೊಳೆ ಸಾಹಿತ್ಯದ ಮಹಾಪಾತ್ರವನ್ನು ತುಂಬಿ ಭೋರ್ಗರೆಯಿತು.

ಮಾತು ಹೇಗೋ ಮಾತಿನ ಕಟ್ಟು ಕೂಡ ಹಾಗೆಯೇ ಹೊಸತನದ ಉಡುಗೆ ಉಟ್ಟಿತು. ಸಂಸ್ಕೃತ ಪ್ರಾಕೃತಗಳಲ್ಲಿ, ಮುಖ್ಯವಾಗಿ ಪ್ರಾಕೃತದಲ್ಲಿ, ನೇರ್ಪಟ್ಟ **ಚಂಪೂ** ಎಂಬ ಗದ್ಯಪದ್ಯಗಳ ಹಿತಮಿತಮಿಶ್ರಣದ ನಿರೂಪಣ ವಿಧಾನವು ಕನ್ನಡದ ಪ್ರತಿಭಾವಂತ ಕವಿಗಳ ಕೈವಾಡದಿಂದ ಒಂದು ಸುಸೂತ್ರ ಸುವ್ಯವಸ್ಥಿತ ಕಾವ್ಯಪದ್ಧತಿಯಾಗಿ ಪರಿಣಮಿಸಿತು. ಇಲ್ಲಿ ಇದರ ಚರಿತ್ರೆ ಈಗಿನ ಮಟ್ಟಿಗೆ ೯ ನೆಯ ಶತಮಾನದ ನಡುಗಾಲದಿಂದ ತೊಡಗುವಂತೆ ತೋರುತ್ತದೆ. ಕನ್ನಡ ಕವಿಗಳು ಗದ್ಯಪದ್ಯಗಳನ್ನು ಉಚಿತ ಪ್ರಮಾಣದಲ್ಲಿ ಬೆರಸುವಲ್ಲಿ, ವಿವಿಧ ವೃತ್ತಗಳನ್ನು ಉಚಿತ ಪ್ರಮಾಣದಲ್ಲಿ ಬಳಸುವಲ್ಲಿ ತೋರಿದ ಔಚಿತ್ಯಜ್ಞಾನ ಸ್ವೋಪಜ್ಞತೆಯ ಫಲ. ಪ್ರಯೋಗಗಳಿಂದ ಹಳೆಯ ವೃತ್ತಗಳಿಗೆ ಈ ಕವಿಗಳು ಹೊಸ ಬಗೆಯ ಹೊಗರು ತುಂಬಿದರು, ಹೊಸ ಹೊಸ ವೃತ್ತಗಳನ್ನೇ ಹೆಣೆದು ಮಾಲೆಗಟ್ಟಿದರು. ದೇಸಿಯಾದವನ್ನು ಅಲ್ಲಿ ಇಲ್ಲಿ ಸೂಸಿ ಚೆಲುವು ಹೆಚ್ಚಿಸಿದರು. ಮಾರ್ಗವೋ ದೇಸಿಯೋ, ಆಯ್ದ ಬಂಧಗಳನ್ನು ಸ್ಥಾನೋಚಿತವಾಗಿ ಹವಣಿಸುವಲ್ಲಿ ಕಲೆಯ ಕೌಶಲವನ್ನು ಮೆರೆದರು. ಒಂದಲ್ಲ ಹಲವು ಇಂಥ ವಿಶೇಷಗಳನ್ನು **ಪಂಪ, ರನ್ನ, ಎರಡನೆಯ ನಾಗವರ್ಮ, ನಯಸೇನ, ಬಂಧುವರ್ಮ** ಹೀಗೆ ಹಲವರಲ್ಲಿ ಕಾಣಬಹುದಾಗಿದೆ.

ಕಾಲ ಉರುಳಿದಂತೆ ಪ್ರತಿಭೆ ಪಾಂಡಿತ್ಯಗಳೂ ಪ್ರಯೋಗ ಪರಿಣತಿಗಳೂ ಮಾಸಿ ಮಸುಳಿದ್ದು ಸಹಜ. ಆದರೆ ಸುಸ್ಥಿರವಾಗಿರುವಂತೆ ನೆಲೆಗೊಳಿಸಿದ್ದ ಸಂಪ್ರದಾಯ ಮುಂದಿನ ಹಲವು ಶತಮಾನಗಳ ಕಾಲ ಮುನ್ನಡೆಯಿತು. ೧೨–೧೩ ನೆಯ ಶತಮಾನಗಳಿಂದೀಚೆಗೆ, ರಾಜಕೀಯವಾದ ಹಲವು ಏರಿಳಿತಗಳೂ ಸಾಮಾಜಿಕ ಧಾರ್ಮಿಕ ಕ್ರಾಂತಿಗಳೂ ಪ್ರವರ್ತಿಸಿದಾಗ ಇವುಗಳ ಪ್ರಭಾವ ಜೈನ ಸಮಾಜ ಧರ್ಮಗಳ ಮೇಲೆ ಆಗದಿರುವುದು ಸಾಧ್ಯವಿರಲಿಲ್ಲ. ಆದರೂ ಅವರು ಬೆಳಸಿ ಬಲಪಡಿಸಿದ್ದ ಸಾಹಿತ್ಯಸಂಪ್ರದಾಯ, ಬಿಟ್ಟೂ ಬಿಡದ ಸೋನೆಯಂತೆ ನಿರಂತರ ಅಮೃತವರ್ಷವನ್ನು ಸೂಸುತ್ತಲೇ ಸಾಗಿತು. **ಆಚಣ್ಣ, ಬಂಧುವರ್ಮ, ಪಾರ್ಶ್ವ, ಜನ್ನ, ಗುಣವರ್ಮ(II), ಕಮಲಭವ, ಆಂಡಯ್ಯ, ಮಹಾಬಲ, ಕುಮುದೇಂದು, ನಾಗರಾಜ, ವೃತ್ತವಿಲಾಸ, ಬಾಹುಬಲಿ ಪಂಡಿತ, ಮಧುರ** ಈ ಕೆಲವರು ಸವಿಸ್ತರವಾದ ತೀರ್ಥಂಕರಚರಿತೆಗಳನ್ನೂ ಇತರ ಬಗೆಯ ಕಾವ್ಯಗಳನ್ನೂ ರಚಿಸಿದರು. ವಸ್ತು ಭಾಷೆ ಬಂಧಗಳಲ್ಲಿ ಆಗಾಗ ಹೊಸತನವನ್ನು ತರುವ ಯತ್ನಗಳು ನಡೆದದ್ದುಂಟು; ಆದರೆ ಹಳೆಯ ನಚ್ಚು ಬಿಡಲಿಲ್ಲ. ಈ ಲಹರಿ ೧೨ ರಿಂದ ೧೪–೧೫ ನೆಯ ಶತಮಾನಗಳವರೆಗೆ ಉಬ್ಬರದಲ್ಲಿದ್ದು, ಅದರ ಮುಂದಿನ



ಮಹಾಕವಿ ರನ್ನ

ಅವಧಿಯಲ್ಲಿ ಇಳಿತವನ್ನು ಅನುಭವಿಸಿದ್ದು ನಿಶ್ಚಯ. ಏರುವುದು ಇಳಿಯುವುದಕ್ಕಾಗಿಯೇ ಎನ್ನುವುದು ಮನುಷ್ಯೇತಿಹಾಸದ ಎಲ್ಲ ಸಂದರ್ಭಗಳಿಗೂ ಅನ್ವಯಿಸುವ ಮಾತು, **ಭಾಸ್ಕರ, ಕಲ್ಯಾಣಕೀರ್ತಿ, ವಿಜಯಣ್ಣ, ಶಿಶುಮಾಯಣ, ಬೊಮ್ಮರಸ, ಮಂಗರಸ, ಸಾಳ್ವ, ರತ್ನಾಕರ** ಹೀಗೆ ಕವಿಗಳ ಮೆರವಣಿಗೆ ಸಾಗಿದೆ, ಈ ಅವಧಿಯಲ್ಲಿ. ಆದರೆ ಆದಿನಾಥನ ಸುತನ ಯಶೋಬಿಂಬವನ್ನು ಬೆಳಗಿದ **ರತ್ನಾಕರ**ನನ್ನು ಬಿಟ್ಟರೆ ಉಳಿದವರ ಕವಿತ್ವದಲ್ಲಿ ಎದ್ದುನಿಲ್ಲುವ ಸತ್ತ್ವವಿಲ್ಲ. ಈ ವೇಳೆಗೆ ತೀರ್ಥಂಕರಚರಿತೆಗಳು ತಮ್ಮ ಪ್ರಭಾವವನ್ನು ಕಳೆದುಕೊಂಡು ಪುನರಾವೃತ್ತಿಗಳು ಅನಗತ್ಯವೆಂಬಂತೆ ಆಗಿದ್ದುವು. ಅಲ್ಪ ಪ್ರಮಾಣದ ಕಥೆಯನ್ನು ವರ್ಣನಾದಿಗಳಿಂದ ಹಿಗ್ಗಿಸುವ ಕೌಶಲ ನಿರರ್ಥಕ ಎಂಬ ಭಾವನೆ ತಲೆದೋರಿತ್ತು. ಆದರೂ ಶಾಂತಿ, ಧರ್ಮ, ಪಾರ್ಶ್ವ ಮತ್ತು ವರ್ಧಮಾನರ ಪುರಾಣಗಳೂ ಆದಿನಾಥನ ಮತ್ತು ಅವನ ಮಕ್ಕಳ ಕಥೆ, ನೇಮಿನಾಥನ ಮತ್ತು ಅವನ ಬಂಧುಗಳಾದ ಹರಿವಂಶ ಕುರುವಂಶದವರ ಕಥೆ, ರಾಮಾಯಣದ ಕಥೆ ಇವುಗಳೂ ಮರಳಿ ಮರಳಿ ಮೊಗದೋರಿದ್ದು ಉಂಟು. ಕೆಲವು ವಿಶೇಷ ಕಾರಣಗಳಿಗಾಗಿ ಕವಿಗಳು ಇವನ್ನು ಆಯ್ದುಕೊಂಡರೂ, ಧಾರ್ಮಿಕ ಆಸಕ್ತಿಯನ್ನು ಕುಗ್ಗದಂತೆ ನೋಡಿಕೊಳ್ಳಲು ಬೇರೆ ಬಗೆಯ ರಚನೆಗಳು ಕಾಣಿಸಿಕೊಳ್ಳತೊಡಗಿದುವು. ಹೀಗೆ ಹುಟ್ಟಿದವು **ನಾಗಕುಮಾರ, ಪ್ರದ್ಯುಮ್ನ, ಸನತ್ಕುಮಾರ, ಜೀವಂಧರ, ಜಯನೃಪ, ಶ್ರೀಪಾಲ, ಜ್ಞಾನಚಂದ್ರ, ಧನ್ಯಕುಮಾರ, ವಜ್ರಕುಮಾರ** ಮುಂತಾದವರು ನಾಯಕರಾಗಿರುವ ಉಪಾಖ್ಯಾನ ಕಥೆಗಳು. ಈ ಜನಪ್ರಿಯ ವ್ಯಕ್ತಿಚರಿತ್ರೆಗಳ ಭಾಷೆ ಬಂಧಗಳು ಸರಳ ಸುಲಭವಾಗಿರುತ್ತಿದ್ದುವು; ಆದರೆ ಗಾತ್ರವೂ ಗುಣವೂ ಗಮನಾರ್ಹ ಪ್ರಮಾಣದಲ್ಲಿ ತಗ್ಗಿಹೋದವು.

ಈವರೆಗೆ ಆಡಿದ್ದು ಸಾಹಿತ್ಯಕೃತಿಗಳ ಮಾತು. ಇಲ್ಲಿ **ಪಂಪ ರನ್ನ ನಾಗಚಂದ್ರ ನೇಮಿಚಂದ್ರ ಜನ್ನ ರತ್ನಾಕರ** ಈ ಕೆಲವರದು ನಿಲ್ಲುವ ಹೆಸರುಗಳು. ಲಕ್ಷಣ, ಶಾಸ್ತ್ರ ಮತ್ತು ಸಿದ್ಧಾಂತಗ್ರಂಥಗಳ ದೃಷ್ಟಿಯಿಂದಲೂ ಈ ಧರ್ಮದವರ ಕೊಡುಗೆ ಮಿಗಿಲಾದ್ದು, ಮೇಲಾದ್ದು. ಅಲಂಕಾರ ವ್ಯಾಕರಣ ಛಂದಸ್ಸು ನಿಘಂಟುರಚನೆ – ಈ ಭಾಷೆಯ ಮೂಲಾಧಾರಗಳಾದ ವಿಷಯಗಳಲ್ಲಿ ಜೈನ ಪಂಡಿತರ ಸಾಧನೆಗಳು, ಸಿದ್ಧಿ ಕನ್ನಡಭಾಷೆಯ ಮೇಲಿನ ಅವರ ಪ್ರೀತಿಯ ಹಾಗೂ ಪ್ರಭುತ್ವದ ನಿದರ್ಶಕಗಳು. ಕವಿರಾಜ ಮಾರ್ಗಕಾರನೆನ್ನಲಾದ **ಶ್ರೀವಿಜಯ, ಇಮ್ಮಡಿ ನಾಗವರ್ಮ, ಉದಯಾದಿತ್ಯ, ಸಾಳ್ವ** ಇವರು ತಮ್ಮ ಕಾವ್ಯಾಲಂಕಾರ ಗ್ರಂಥಗಳಿಗೆ **ಭಾಮಹ, ದಂಡಿ, ವಾಮನ, ಉದ್ಭಟ, ರುದ್ರಟ, ಅಮರಚಂದ್ರ, ರಾಜಶೇಖರ, ಮಮ್ಮಟ, ಅಮೃತಾನಂದಿ, ರುದ್ರಭಟ್ಟ, ವಿದ್ಯಾನಾಥ, ಹೇಮಚಂದ್ರ** ಮುಂತಾದವರಿಂದ ಯಥೋಚಿತವಾಗಿ ವಿಷಯಸಂಗ್ರಹ ಮಾಡಿದ್ದಾರೆ. ಸಂಸ್ಕೃತ ಪ್ರಾಕೃತ ಮತ್ತು ಕನ್ನಡ ಸಾಹಿತ್ಯಗಳಿಂದ ಲಕ್ಷ್ಯವನ್ನು ಅನುವಾದಿಸಿಯೂ ಉದ್ಧರಿಸಿಯೂ ಲಕ್ಷಣ ವಿಶದೀಕರಣವನ್ನು ಮಾಡಿದ್ದಾರೆ. ನಾಗವರ್ಮನು ಆಯ್ದ ಲಕ್ಷ್ಯಪದ್ಯಗಳಿಗೆ ಮಾತೃಕೆಗಳಾಗಿಯೋ ಸಂವಾದಿಗಳಾಗಿಯೋ ಇರುವ ಪದ್ಯಗಳು **ವಾಲ್ಮೀಕಿ, ವ್ಯಾಸ, ಕಾಲಿದಾಸ, ಭಾರವಿ, ಭವಭೂತಿ, ಭಟ್ಟಿ, ಮಾಘ, ಭರ್ತೃಹರಿ, ಶ್ರೀಪಾಲ, ಹೇಮಚಂದ್ರ, ಆನಂದವರ್ಧನ** ಇವರ ಗ್ರಂಥಗಳಲ್ಲಿಯೂ ಹಲವು ಸುಭಾಷಿತಸಂಗ್ರಹಗಳಲ್ಲಿಯೂ ಕಂಡುಬರುತ್ತವೆ ಎಂಬುದನ್ನು ಗಮನಿಸಿದರೆ ಆತನ ವ್ಯಾಸಂಗದ ವೈಶಾಲ್ಯ ಮನವರಿಕೆಯಾಗುತ್ತದೆ. ವಿಷಯ, ಸಂಯೋಜನೆ, ನಿರೂಪಣೆಗಳಲ್ಲಿ ವೈಯಕ್ತಿಕತೆಯನ್ನು ತೋರಿರುವುದರ ಜತೆಗೆ ಭಾರತೀಯ ಕಾವ್ಯಮೀಮಾಂಸೆಗೇ ಕಾಣಿಕೆಯೆನ್ನಬಹುದಾದ ಸ್ವತಂತ್ರ ವಿಚಾರದೃಷ್ಟಿಯ ಕೆಲವಂಶಗಳನ್ನು ಕೂಡ ಕನ್ನಡ ಆಲಂಕಾರಿಕರಲ್ಲಿ ಒಬ್ಬರಿಬ್ಬರು ತೋರಿದ್ದಾರೆಂಬ ಅಭಿಪ್ರಾಯವೂ ಇದೆ. ಸಂಸ್ಕೃತ ಕಾವ್ಯಾಲಂಕಾರ ಗ್ರಂಥಗಳ ಸಾರಭಾಗವನ್ನೆಲ್ಲ ಕನ್ನಡಕ್ಕೆ ತಂದುಕೊಳ್ಳುವ ಯತ್ನದಲ್ಲಿ, ಅಲ್ಲಿಯ ಅಲಂಕಾರತತ್ತ್ವಗಳ ಒರೆಗಲ್ಲಿಗೆ ಕನ್ನಡ ಕವಿತ್ವದ ರೀತಿನೀತಿಗಳನ್ನು ತಿಕ್ಕಿ ನೋಡುವ ವ್ಯಾಜದಲ್ಲಿ, ಎರಡೂ ಭಾಷೆಗಳ ಮತ್ತು ಸಂಸ್ಕೃತಿಗಳ ಸಾಮರಸ್ಯವನ್ನು ಜೈನಪಂಡಿತರು ಅದೊಂದು ಬಗೆಯಲ್ಲಿ ಸಾಧಿಸಿದ್ದಾರೆನ್ನಬಹುದು.

ವ್ಯಾಕರಣ ವಿಷಯಗಳಲ್ಲಿಯೂ ಇದೇ ನೀತಿ, ರೀತಿ. ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿ ರಚಿತವಾದ ವ್ಯಾಕರಣಗಳ ಪ್ರಸಿದ್ಧ ಮಾದರಿಗಳನ್ನು ಕಣ್ಣ ಮುಂದಿಟ್ಟುಕೊಂಡು, ಪ್ರೇರಣೆಯನ್ನೂ ಅಲ್ಲಿಂದಲೇ ಪಡೆದು, ಜೈನ ವೈಯಾಕರಣರು ಖ್ಯಾತ ಹಳಗನ್ನಡ ವ್ಯಾಕರಣಗಳನ್ನು ರಚಿಸಿದ್ದಾರೆ. ಛಂದಸ್ಸು ನಿಘಂಟುರಚನೆಯ ಕ್ಷೇತ್ರದಲ್ಲಿಯೂ ಜೈನಕವಿಗಳ ಕೊಡುಗೆ ಗಣ್ಯವಾದದ್ದಾಗಿದೆ. ಸಂಸ್ಕೃತ ಕನ್ನಡ ಭಾಷೆಗಳಿಗೆ ಪ್ರಾಚೀನ ಕಾಲದಿಂದ ಇದ್ದ ಆತ್ಮೀಯ ಸಂಬಂಧವನ್ನು ಊರ್ಜಿತಗೊಳಿಸಲು, ಉತ್ಕೃಷ್ಟ ಕಾವ್ಯ ಪರಂಪರೆಯ ಭಾಷೆಯಾದ ಹಳಗನ್ನಡವನ್ನು ಉಳಿಸಿ ಬೆಳೆಸಲು, ಜೈನ ಲಾಕ್ಷಣಿಕರು ನಿರಂತರವಾಗಿ ನಡಸಿದ ಪ್ರಯತ್ನಗಳು ಅನನ್ಯವಾದವು; ತಾಳಿ ಬಾಳುವ ಬೆಲೆಯುಳ್ಳವು.

**ಶ್ರವಣಬೆಳಗೊಳದ ಶಾಸನ**

**ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆರವೊಲ್ ಮಂಜುವೊಲ್ ತೋರಿಬೇಗಂ**
**ಪಿರಿಗುಂ ಶ್ರೀರೂಪಲೀಲಾಧನವಿಭವಮಹಾರಾಶಿಗಳ್ ನಿಲ್ಲವಾರ್ಗಂ**
**ಪರಮಾರ್ಥಂ ಮೆಚ್ಚೆನಾನೀ ಧರಣಿಯುಳಿರವಾನೆಂದು ಸಂನ್ಯಾಸನಂಗೆ**
**ಯ್ದುರುಸತ್ವನ್ ನಂದಿಸೇನಪ್ರವರಮುನಿವರನ್ ದೇವಲೋಕಕ್ಕೆ ಸಂದಾನ್**

**"ಇಹಲೋಕದ ಭೋಗಭಾಗ್ಯಗಳು ಮಳೆಬಿಲ್ಲಿನಂತೆ; ಮಿಂಚಿನ ಸಂಚಲನದಂತೆ; ಮಂಜಿನಂತೆ ಚಂಚಲವಾದುವು; ಈ ಅಸ್ಥಿರಸುಖವನ್ನು ನಾನು ಮೆಚ್ಚೆನು. ಈ ಲೋಕದ ಸಹವಾಸ ನನಗೆ ಸಾಕು" – ಹೀಗೆಂದುಕೊಂಡು ಸಂನ್ಯಾಸವನ್ನು ಸ್ವೀಕರಿಸಿ (ಸಲ್ಲೇಖನವ್ರತವನ್ನು ಆಚರಿಸಿ), ನಂದಿಸೇನ ಮುನಿವರನು ಸ್ವರ್ಗಲೋಕಕ್ಕೆ ಹೋದನು.**

ಈ ಲಾಕ್ಷಣಿಕರ ಸೇವೆಯಂತೆಯೇ ಸ್ಮರಣೀಯವಾದದ್ದು ಶಾಸ್ತ್ರಕಾರರ ಸೇವೆ ಕೂಡ. ಜೈನಧರ್ಮೀಯರು ಮುಖ್ಯವಾಗಿ ತಮ್ಮ ಧರ್ಮದ ಬೆಳವಣಿಗೆಯ ದೃಷ್ಟಿಯಿಂದ ಕನ್ನಡ ಸಾಹಿತ್ಯಕ್ಕೆ ಪ್ರವೇಶಿಸಿದರು. ಪ್ರಾಚೀನರೂ ಪ್ರಸಿದ್ಧರೂ ಆದ ತಮ್ಮ ಆಚಾರ್ಯಪುರುಷರ ಸೈದ್ಧಾಂತಿಕ ಗ್ರಂಥಗಳಿಗೆ ವೃತ್ತಿ ವ್ಯಾಖ್ಯಾನಗಳ ರೀತಿಯ ರಚನೆಗಳನ್ನು ಮಾಡತೊಡಗಿ ಕನ್ನಡದಲ್ಲಿ ಲಿಖಿತರೂಪದ ಸಾಹಿತ್ಯೋದಯಕ್ಕೆ ಅಂಕುರಾರ್ಪಣೆ ಮಾಡಿದರೆಂದು ತೋರುತ್ತದೆ. ಎಷ್ಟೋ ಪ್ರಾಚೀನ ಅರ್ವಾಚೀನ ಜೈನಾಚಾರ್ಯರ ಕೃತಿಗಳಿಗೆ ಕನ್ನಡದಲ್ಲಿ ವೃತ್ತಿ ವ್ಯಾಖ್ಯಾನಗಳು ಹುಟ್ಟಿವೆ. ಸುಮಾರು ೭–೮ ನೆಯ ಶತಮಾನದಿಂದ ೧೯ ನೆಯ ಶತಮಾನದವರೆಗೆ ಇವುಗಳ ವ್ಯಾಪ್ತಿ. ಹೀಗೆಯೇ **ಬ್ರಹ್ಮಶಿವ, ಮಾಘಣಂದಿ, ಆಯತವರ್ಮ, ಕಲ್ಯಾಣಕೀರ್ತಿ, ವಿಜಯಣ್ಣ, ನೇಮಣ್ಣ, ಪಾಯಣ್ಣ** ಮುಂತಾದವರೂ ಕೆಲವು ಮತಪರ ಹಾಗೂ ಸಿದ್ಧಾಂತ ಗ್ರಂಥಗಳನ್ನು ರಚಿಸಿದ್ದಾರೆ. ಈ ಗುಂಪಿನಲ್ಲೇ ಹೇಳಬಹುದಾದದ್ದು ಅಕ್ಷರಮಾಲೆಗಳು, ಅಷ್ಟಕ, ಶತಕ ಮತ್ತು ಸ್ತೋತ್ರ ಸಾಹಿತ್ಯ ಕೂಡ. ಪಂಚಪರಮೇಷ್ಠಿಗಳ, ತೀರ್ಥಂಕರರ ಮತ್ತು ಅನ್ಯಮಹಾಪುರುಷರ ಸ್ತುತಿ ಇಲ್ಲಿಯ ವಸ್ತು. **(ಆಧಾರ: 'ಶಾಸ್ತ್ರೀಯ' – ಸಂ. ೩, ೧೯೫೯, ಪು. ೨೭–೩೨.)**